ಶ್ರೀ ಎಚ್. ಆರ್. ಕೇಶವಮೂರ್ತಿ.—ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸೊಸೈಟಿಗಳಿಗೆ ಸಕ್ಕರೆಯನ್ನು ಕೊಟ್ಟರೂ ಕನ್ಸ್ಯೂಮರುಗಳಿಗೆ ಸರಿಯಾಗಿ ತಲುಪುತ್ತಾ ಇಲ್ಲ. ಅದನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುತ್ತಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಅಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ. ಅಂಥಾದ್ದು ಏನಾದರೂ ಇದೆಯೆಂದು ಕಂಪ್ಲೆಟ್ ಮಾಡಿದರೆ ಆ ಬಗ್ಗೆ ಎನ್‌ಕ್ವೈರಿ ಮಾಡುತ್ತೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಅನೇಕ ಸಹಕಾರ ಸಂಸ್ಥೆಗಳು ಸಕ್ಕರೆಯನ್ನು ನಿಯಂತ್ರಣ ಬೆಲೆಗೆ ಮಾರಾಟ ಮಾಡುವುದರಿಂದ ಸಕ್ಕರೆಯ ಟ್ರಾನ್ಸ್‌ಪೋರ್ಟೇಷನ್ ಚಾರ್ಜನ್ನು ಏರಿಟ್ ಮಾಡಿದರೆ ಅವರಿಗೆ ಲಾಸ್ ಆಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಆ ರೀತಿ ರಿಪೋರ್ಟ್ ಬಂದಿಲ್ಲ, ಬಂದರೆ ಕಸಿದರ್ ಮಾಡುತ್ತೇವೆ.

Sri D. M. SIDDAIAH.—Will the Government reconsider the question of allotment to City and Rural District on a population basis ?

Sri B. D. JATTI.—The sugar allotted to the State is on the population basis and per capita consumption basis of 1½ lbs. per head per month in urban areas and ½ lb. per head per month in rural areas. The same basis is extended to Mysore District. The suggestion of some of the Hon'ble Members is that the basis should be changed. It is a suggestion for action. It will be considered.

ಶ್ರೀ ಎಸ್. ಗೋಪಾಲಗೌಡ.—ಹಬ್ಬ, ಮದುವೆ, ಮುಂಜಿ ಇಂಥಾ ಸಂದರ್ಭಗಳಲ್ಲಿ ತಹಶೀಲ್ದಾರರ ಕಚೆಗೆ ಸಕ್ಕರೆಗೆ ಹೋದಾಗ ಅಲ್ಲಿ ಅವರು ರಾಟರಿ ಟಿಕೆಟ್, ಡಿಫೆನ್ಸ್ ಫಂಡಿಗೆ ಹಣ ಕೇಳುವುದು ಇದ್ದಿದ್ದರೆ ಸರ್‌ಥಾರ್ಜ್ ಪೂರ್ತಿ ಕಟ್ಟಿರಿ ಎಂದು ಅವರ ಮೇಲೆ ಪ್ರಭಾವ ಮತ್ತು ಒತ್ತಾಯ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಈಗ ಡಿಫೆನ್ಸ್ ಫಂಡ್ ಕರೆಕ್ಟ್ ಮಾಡುತ್ತಾ ಇಲ್ಲ. ರಾಟರಿಗಂತೂ ಲೈಸೆನ್ಸ್ ಕೊಟ್ಟೇ ಇಲ್ಲ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಕಾಣುತ್ತದೆ.

1-00 P.M.

Anti-Corruption cases Instituted against the Gazetted Officers of Government for the last Three years.

*Q.—170. **Sri T. N. MADAPPA GOWDA** (Nagamangala).—

Will the Government be pleased to state :—

(*a*) the number of Anti-Corruption cases instituted departmental-wise for the last 3 years in respect of Gazetted Officers of Government ;

(*b*) how many of the cases have been decided so far ;

(*c*) how many have gone in appeal ;

(*d*) how many cases have gone against the Government in the appeals ;

(*e*) the total expenses incurred to handle the above cases ;

(*f*) what is the amount of compensation paid so far to the officials by way of arrears of pay and allowances ?

A.—**Sri VEERENDRA PATIL** (Minister for Public Work) [on behal of **Sri S. NIJALINGAPPA** (Chief Minister)].—

A.—(*a*) 136 cases involving 160 Gazetted Officers were instituted during the last 3 years by the Anti-Corruption Department as detailed below :

	Department	*Number of Gazetted Officers.*	*Number of cases*
1	Revenue ...	32	30
2	Police ...	7	6
3	Public Works Department ...	34	31
4	Education ...	4	4
5	Medical ...	5	5
6	Technical Education ...	1	1
7	Forest ...	4	3
8	Survey and Settlement ...	2	2
9	Development ...	20	17
10	Labour ...	2	2
11	Public Health ...	5	5
12	Commercial Taxes ...	1	1
13	Social Welfare ...	3	3
14	Animal Husbandry ...	3	3
15	Transport ...	8	2
16	Industries and Commerce ...	8	7
17	State Accounts Department ...	1	1
18	Fisheries ...	1	1
19	Horticulture ...	1	1
20	Publicity and Information ...	1	1
21	Electrical ...	7	1
22	Excise ...	3	3
23	Stores Purchase Committe ...	2	1
24	Agriculture ...	4	4
25	Co-operative Society ...	1	1
	Total ...	160	136

(*b*) 29 cases have been decided so far involving 33 officers.

(*c*) Only one has filed writ petition before the High Court of Mysore and it is pending decision.

(*d*) Nil.

(*e*) Does not arise in view of reply at '*d*'.

(*f*) Nil.

ಶ್ರೀ ಟಿ. ಎನ್. ಮಾದಪ್ಪಗೌಡ.—33 ಅಧಿಕಾರಿಗಳಿಗೆ ಸಂಬಂಧಪಟ್ಟಂತೆ 29 ಪ್ರಕರಣಗಳಲ್ಲಿ ಇತ್ಯರ್ಥವಾಗಿದೆ ಎಂದು ಹೇಳುತ್ತ, ಅದಕ್ಕೆ ಖರ್ಚು ಏನೂ ಆಗಿಲ್ಲ ಎಂದು ಹೇಳುತ್ತಾರೆ. ಇದು ಸರಿಯೇ ಸ್ವಾಮಿ ?

ಶ್ರೀ ವೀರೇಂದ್ರಪಾಟೀಲ್.—ಖರ್ಚು ಆಗುವ ಪ್ರಶ್ನೆಯೇ ಬರುವ ಹಾಗಿಲ್ಲ. ನಮ್ಮ ಲಂಚ ನಿರೋಧ ಶಾಖೆಯಲ್ಲಿನ ಅಧಿಕಾರಿಗಳು ಎನ್‌ಕ್ವೈರಿ ಮಾಡಿ ರಿಪೋರ್ಟ್ ಕಳಿಸುತ್ತಾರೆ. ಆದರ ಮೇಲೆ ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತದೆ.

Sri G. V. GOWDA.—Sir, only 29 cases have been decided and these matters are pending for the last three years in the Department of Anti-Corruption. May I know why there has been inordinate delay in the disposal of these cases?

Sri VEERENDRA PATIL.—I have never stated in the reply that all the 160 cases are pending since the last three years. They wanted to know the total number of cases during the last three years and I have given the list.

ಶ್ರೀ ಟಿ. ಎನ್. ಮಾದಪ್ಪಗೌಡ.—ಒಂದು ಕೇಸಿನಲ್ಲಿ ಮಾತ್ರ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದಾರೆಂದು ಹೇಳಿದೆ. ಅವರು ಯಾವ ಇಲಾಖೆಗೆ ಸಂಬಂಧಪಟ್ಟವರು?

ಶ್ರೀ ವೀರೇಂದ್ರಪಾಟೀಲ್.—ರೆವೆನ್ಯೂ ಇಲಾಖೆಗೆ ಸಂಬಂಧಪಟ್ಟವರು ಎಂದು ಕಾಣುತ್ತದೆ.

Sri D. VENKATARAMAIAH.—Out of these 29 cases, in how many cases charges have been proved and in how many it has not been proved?

Sri VEERENDRA PATIL.—In 20 cases charges have been proved and punishments varying from Government displeasure to reversion have been awarded.

ಶ್ರೀ ಸಿ. ಆರ್. ರಂಗೇ ಗೌಡ.—160 ಅಧಿಕಾರಿಗಳಿಗೆ ಸಂಬಂಧಪಟ್ಟಂತೆ 136 ಪ್ರಕರಣಗಳು ನಡೆದಿವೆ ಎಂದು ಹೇಳಿದ್ದಾರೆ. ಇದರಲ್ಲಿ ಎಷ್ಟು ಅಧಿಕಾರಿಗಳನ್ನು ನಸ್ಪೆಂಡ್ ಮಾಡಿದ್ದೀರಿ? ಅವರ ಮೇಲೆ ಕೇಸುಗಳಿದ್ದರೂ ಎಷ್ಟು ಜನರಿಗೆ ಪ್ರಮೋಷನ್ ಕೊಟ್ಟಿದ್ದೀರಿ? ಅಧಿಕಾರಿಗಳು ರಿಜೈರ್ ಆಗಿದ್ದರೂ ತೀರ್ಮಾನವಾಗದೆ ಎಷ್ಟು ಕೇಸುಗಳಿವೆ?

ಶ್ರೀ ವೀರೇಂದ್ರಪಾಟೀಲ್.—ಪ್ರತ್ಯೇಕ ಪ್ರಶ್ನೆ ಹಾಕಿದರೆ ಬೇಕಾದ ಇನ್‌ಫರ್‌ಮೇಷನ್ ಕೊಡಬಹುದು. ಈಗ ನನ್ನ ಹತ್ತಿರ ಆ ವಿವರಗಳಿಲ್ಲ.

ಶ್ರಿ ಎನ್ ಹುಚ್ಚೆಮಾಸ್ತಿ ಗೌಡ.—ಇಲಾಖೆಗಳಲ್ಲಿ ಎನ್‌ಕ್ವೈರಿಗೆ ಹೋದರೆ ಎಷ್ಟು ದಿವಸಗಳಲ್ಲಿ ತನಿಖೆ ಪೂರ್ತಿಯಾಗಬೇಕೆಂದು ವಿಧಾಯಕ ಮಾಡಿದ್ದೀರಿ?

ಶ್ರೀ ವೀರೇಂದ್ರಪಾಟೀಲ್.—ಆರು ತಿಂಗಳಲ್ಲಿ ಮುಗಿಯಬೇಕೆಂದು ಹೇಳಿದ್ದೇವೆ. ಕೆಲವು ಸಂದರ್ಭಗಳಲ್ಲಿ ಎನ್‌ಕ್ವೈರಿ ಆರು ತಿಂಗಳಲ್ಲಿ ಮುಗಿಯದೆ ಹೋದರೆ ಕಾಲವನ್ನು ಹೆಚ್ಚು ಮಾಡಬೇಕಾಗುತ್ತವೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಕೆಲವು ಇಲಾಖೆಗಳಲ್ಲಿ ಕೆಲಸದಿಂದ ತೆಗೆದಂಥ ಅಧಿಕಾರಿಗಳಿಗೆ ಈಚೆಗೆ ಅವರಿಗೆ ಸಂಬಳ ಕೊಟ್ಟು, ಪ್ರಮೋಷನ್ ಕೊಟ್ಟು ಕಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರ ಗಮನದಲ್ಲಿ ಯಾವುದಾದರೂ ಇದ್ದರೆ ಅದನ್ನು ತಿಳಿಸಿದರೆ ವಿಚಾರ ಮಾಡುತ್ತೇವೆ. ನನಗೆ ಯಾವುದೂ ಗೊತ್ತಿಲ್ಲ.

Sri G. V. GOWDA.—In respect of these 20 cases only punishment has been awarded to these officials. May I know whether there are any cases where in criminal prosecution has been launched against them?

Sri VEERENDRA PATIL.—Sir, in two cases we proceeded against them under the provisions of the Prevention of Corruption Act and the Indian Penal Code and they were tried in the Courts of Law.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅಂಟಿ ಕರಪ್ಷನ್ ವಿಷಯದಲ್ಲಿ ಏನೇನು ನಡವಳಿಗಳನ್ನು ಸರ್ಕಾರದವರು ನಡೆಸಿದ್ದಾರೆ ಎಂದು ಒಂದು ರಿಪೋರ್ಟನ್ನು ತಯಾರಿಸಿ ಸಭೆಯ ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಸಾಧ್ಯವೇ, ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಹೇಗೆ ಕೊಡಬೇಕು, ಯಾವ ರೀತಿಯ ಇನ್‌ಫರಮೇಷನ್ ಬೇಕು ಎಂದು ಕೇಳಿದರೆ ಕೊಡಬಹುದು.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಪಿ. ಎಸ್. ಸಿ. ರಿಪೋರ್ಟ್ ಮಾದರಿಯಲ್ಲಿ ಅಂಟಿ ಕರಪಷನ್ ಇಲಾಖೆಯ ಬಗ್ಗೆಯೂ ಒಂದು ವರದಿಯನ್ನು ಸಭೆಗೆ ಒದಗಿಸುವುದಕ್ಕೆ ಸಾಧ್ಯವಿಲ್ಲವೇ, ಸ್ವಾಮಿ?

Mr. SPEAKER.—He should put a separate question for that.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಎನೆಕ್ಟ್ರೈರಿಮಾಡಿ ರಿಪೋರ್ಟನ್ನು ಕಳಿಸಲು ಆರು ತಿಂಗಳ ಪಾಯಿದೆ ಜಾಸ್ತಿಯಾಗಿರುವುದರಿಂದ ಅದನ್ನು ಕಡಮೆ ಮಾಡುವುದಕ್ಕೆ ಸಾಧ್ಯವಿಲ್ಲವೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಸಿ. ಸಿ. ಎ. ರೂಲ್ಸ್ ಪ್ರಕಾರ ಎನೆಕ್ಟ್ರೈರಿ ಮಾಡುತ್ತೇವೆ. ಅದರಲ್ಲಿ ಪ್ರೊಸೀಜರ್ ಪ್ರಕಾರ ಮಾಡದೆ ಇದ್ದರೆ ಎನೆಕ್ಟ್ರೈರಿ ಡಿಫೆಕ್ಟಿವ್ ಆಗಿ ಮತ್ತೊಂದು ಸಲ ಎನೆಕ್ಟ್ರೈರಿ ಮಾಡಬೇಕಾದರೆ ಚೈಂ ಜಾಸ್ತಿ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಅಧಿಕಾರಿಗಳಿಗೆ ಹರಾನಮೆಂಟ್ ಆಗುತ್ತದೆ. ಅದುದರಿಂದ ಪ್ರೊಸೀಜರ್ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಆರು ತಿಂಗಳ ಒಳಗೇ ಎನ್‌ಕ್ವೈರಿ ಮುಗಿದರೆ ಬೇಡ ಎನ್ನುವ ಹಾಗಿಲ್ಲ. ಆರು ತಿಂಗಳಿಗಿಂತ ಹೆಚ್ಚು ಸಮಯವನ್ನು ತೆಗೆದುಕೊಳ್ಳಬಾರದು ಎನ್ನುವುದು ಸರ್ಕಾರದ ಉದ್ದೇಶ.

ಶ್ರೀ ಎಸ್. ಗೋಪಾಲ ಗೌಡ.—ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವ ಬಗ್ಗೆ ಕೇಂದ್ರದಲ್ಲಿ ವಿಜಿಲೆನ್ಸ್ ಕಮಿಷನ್ ನೇಮಕ ಮಾಡಿದ್ದಾರೆ ಮತ್ತು ಅನೇಕ ರಾಜ್ಯಗಳಲ್ಲಿ ಈಗಾಗಲೇ ವಿಜಲನ್ಸ್ ಕಮಿಷನ್ ಮಾಡಿದ್ದಾರೆ. ಕೇಂದ್ರದ ಗೃಹಸಚಿವರಾದ ನಂದಾ ಅವರು ಹೇಳಿದ ಹಾಗೆ ಸದಾಚಾರ ಸಮಿತಿಯನ್ನೇನಾದರೂ ನೇಮಕ ಮಾಡಿಕೊಂಡು ಈ ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

Sri B. D. JATTI.—Government have decided to appoint one-man commission and Government are on the lookout for a suitable person. So far, we have not been able to find out a suitable person.

ಶ್ರೀ ಸಿ. ಆರ್. ರಂಗೇಗೌಡ.—ಅಂಟಿ ಕರಪ್ಷನ್ ಇಲಾಖೆಯಲ್ಲಿ ಯಲ್ಲಿರುವ ಲಂಚಗುಳಿತನವನ್ನು ಪತ್ತೆ ಹಚ್ಚುವುದಕ್ಕೆ ಏನಾದರೂ ಇಲಾಖೆ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಂಟಿ ಕರಪ್ಷನ್ ಇಲಾಖೆಯಲ್ಲಿ ಕರಪ್ಷನ್ ಇದೆ ಎನ್ನುವುದು ಬಹುಶಃ ಮಾನ್ಯ ಸದಸ್ಯರ ಅಭಿಪ್ರಾಯವೆಂದು ಕಾಣುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಕಳೆದ ಅಧಿವೇಶನದಲ್ಲಿ ವಿಜಿಲೆನ್ಸ್ ಕಮಿಷನರ್ ಒಬ್ಬರನ್ನು ನೇಮಕ ಮಾಡುವ ಪ್ರಶ್ನೆ ಬಂದಾಗ ಸರ್ಕಾರದವರು ಇನ್ನು ಹತ್ತು ದಿವಸಗಳಲ್ಲಿ ಒಬ್ಬರನ್ನು ನೇಮಕ ಮಾಡುತ್ತೇವೆಂದು ಈ ಸಭೆಗೆ ಆಶ್ವಾಸನೆ ಕೊಟ್ಟಿದ್ದರು, ಈಗಾಗಲೇ ಮೂರು ತಿಂಗಳು ಕಳೆಯಿತು. ಈ ಮೂರು ತಿಂಗಳೂ ಸತತವಾಗಿ ಸರ್ಕಾರದವರು ಪ್ರಯತ್ನ ಮಾಡಿದರೂ ಇನ್ನೂ ವಿಜಿಲೆನ್ಸ್ ಕಮಿಷನರ್ ಆಗತಕ್ಕ ಯೋಗ್ಯತೆಯನ್ನು ಪಡೆದಿರತಕ್ಕ ಮನುಷ್ಯ ಸಿಕ್ಕಿಲ್ಲ ಎನ್ನುವುದು ಸರ್ಕಾರದ ಅಭಿಪ್ರಾಯವೇ, ಸ್ವಾಮಿ ?

Sri B. D. JATTI.—There were two persons who were fit to act as Vigilance Commissioners. But both of them have been appointed somewhere else. So, we are in search of a third person.

ಶ್ರೀ ಎಸ್. ಗೋಪಾಲ ಗೌಡ.—ಈಗ ಸ್ಯೂಟಬಲ್ ಅದವರು ಯಾರೂ ಸಿಕ್ಕಿಲ್ಲ ಎಂದು ಹೇಳಿದರು. ಸ್ಯೂಟಬಲ್ ಎಂದರೆ ಈಗ ಅಧಿಕಾರದಲ್ಲಿರುವ ಪಕ್ಷದವರ ಪರಿಚಯವಿದ್ದು ಅವರು ಏನಾದರೂ ಭ್ರಷ್ಟಾಚಾರಕ್ಕೆ ಬಲಿಯಾಗಿದ್ದರೆ ಅವರನ್ನು ಬಿಟ್ಟು ಅಧಿಕಾರದಲ್ಲಿರುವ ಪಕ್ಷದವರು ಹೇಳಿದವರನ್ನು ಬೆಳಕಿಗೆ ತರುವಂಥ ವಿಜಿಲೆನ್ಸ್ ಕಮಿಷನರು ಎಂದೇ ? ಅದರ ಅರ್ಥವಾದರೂ ಏನು, ಸ್ವಾಮಿ ?

Sri B. D. JATTI.—Sir, the Government of India have prescribed certain conditions and they are three. One is that he should be a retired High Court Judge. No. 2 is a retired Secretary working in the Union Government, and No. 3 is an eminent person who has got a reputation for honesty, integrity and ability. Out of there these three categories, we will have to select somebody.

Working of the SMP Centre at Malghan in Bagewadi Taluk.

*Q.—472. Smt. SUSHEELABAI SHAH (Begewadi).—

Will the Government be pleased to state :—

(*a*) since how many years the SMP Centre at Malghan in Bagewadi Taluk, District Bijapur, is working ;

(*b*) whether the Medical Officer has been posted there ?